ತಬ್ಬಿಕೊಳ್ಳುತ್ತಿತ್ತು. ತಾನು ಕಾಣುವ ನೋಟಗಳೆಲ್ಲ ಪರಿಷ್ಕರಣೆಗೆ ಒಳಪಡುತ್ತಿದ್ದವು.

ಇಂಥ ದಿವ್ಯತರವಾದ ಸಾಹಿತ್ಯದ ಸಾಂಗತ್ಯದಲ್ಲಿ ಜೊತೆಯಾದವನು ಆರಾಧ್ಯ. ಇಬ್ಬರೂ ಕ್ಲಾಸ್‌ಮೇಟ್‌ಗಳು. ಪ್ರಣತಿ ಮೊದಲಿಂದ ಮೌನಿಯಾಗಿದ್ದುಕೊಂಡು ಮನಸ್ಸಿನಲ್ಲಿ ಹೆಚ್ಚು ಪ್ರಖರವಾಗಿ ಮಾತಾಡಿಕೊಳ್ಳುತ್ತಿದ್ದರೆ ಆರಾಧ್ಯ ತನ್ನದಲ್ಲದ ಮತ್ತು ಅಷ್ಟು ಸ್ಟಫ್ ಇದೆ ಅನಿಸದ ವಿಚಾರವನ್ನೂ ಡೊಳ್ಳು ನುಡಿಸುವ ಹಾಗೆ ಸದ್ದು ಮಾಡುತ್ತ ಮಾತಾಡುತ್ತಿದ್ದವನು. ಪ್ರಣತಿಗೆ ಆರಾಧ್ಯ ಮೊದಲು ಹುಚ್ಚ ಅನಿಸಿದ್ದ. ಅವನನ್ನು ನೆನೆಸಿಕೊಂಡು ಒಳಗೊಳಗೇ ನಗುತ್ತಿದ್ದಳು. ಆದರೆ, ಮನೆಯಲ್ಲಿ ಪ್ರಣತಿಯ ಅಮ್ಮನ ವ್ಯಂಗ್ಯದ ಮಾತುಗಳು ಆರಂಭವಾಗಿ, 'ನಿನ್ನ ಫ್ರೆಂಡ್ ನೋಡು, ಎಂಟೆಕ್ ಮಾಡಿರೋ ಹುಡುಗಾನೇ ಬೇಕು ಅಂತ ಪಟ್ಟುಹಿಡಿದು ಈಗ ಮದುವೆ ಆಗ್ತಿದ್ದಾಳೆ. ಮುಂದಕ್ಕೆ ಅವಳ ಬದುಕು ಝುಂ ಅಂತ ಇರುತ್ತೆ. ನೀನು ಕಾದಂಬರಿಗಳನ್ನು ಓದ್ಕೊಂಡು ಇರು' ಅಂದಾಗ ಪ್ರಣತಿಗೆ ಕೊಂಚ ಬೇಜಾರಾಗಿ ಆರಾಧ್ಯನ ಪರಮವಾಚ್ಯ ಮಾತುಗಳೂ ಹಿಡಿಸಲು ಆರಂಭವಾಗಿದ್ದವು. ಅಮ್ಮನ ಕೊಂಕು ಹೆಚ್ಚಿದಂತೆಲ್ಲ ಆರಾಧ್ಯನ ಕಡೆ ಒಲವು ಹೆಚ್ಚುತ್ತಿತ್ತು. ಇದು ಹುಚ್ಚುತನ ಇರಬಹುದು ಎಂದು ಅನಿಸುತ್ತಿದ್ದರೂ ಅಮ್ಮನನ್ನು ಮತ್ತು ಪರಮ ಲೌಕಿಕದ ಬದುಕನ್ನು ಸಾಹಿತ್ಯದಿಂದ ಸೋಲಿಸಿಬಿಡಬೇಕು ಅನಿಸಿತ್ತು. ಕೊಂಚ ಒಪ್ಪ ಓರಣವಾಗಿದ್ದು ನೋಡಿದ ಕೂಡಲೇ ಸೆಳೆಯುವ ಮುಖಭಾವ ಇದ್ದದ್ದರಿಂದ ಆರಾಧ್ಯ ಕೂಡ ಪ್ರಣತಿ ಕಡೆಗೆ ಸೆಳೆಯಲ್ಪಟ್ಟಿದ್ದ. ಎಂಟೆಕ್ ಮಿಕ ತನಗೆ ಸಿಗದಿದ್ದರೂ ಶಿವರಾಮ ಕಾರಂತರನ್ನು ಓದಿ ತಾನೇನು ಖಾಲಿ ಕೂತಿಲ್ಲ ಎನ್ನುವುದನ್ನು ಖಾತ್ರಿ ಪಡಿಸಲಿಕ್ಕೇ ಪ್ರಣತಿ ಆರಾಧ್ಯನಿಗೆ ಹತ್ತಿರವಾಗುತ್ತ ಬಂದದ್ದು. ಆರಾಧ್ಯ ಕೂಡ ಪ್ರಣತಿಯಲ್ಲಿನ ಎಕ್ಸ್‌ಟ್ರೀಮ್ ಇಂಟಲೆಕ್ಚುವಲ್ ಕ್ವಾಲಿಟಿ ಗುರುತಿಸಿದ್ದ. ಜೊತೆಗೆ ಅವನಲ್ಲಿ ಸಣ್ಣ ಪ್ರಮಾಣದ ಅಳುಕೂ ಆರಂಭವಾಗಿತ್ತು. ಪ್ರಣತಿ ಸಾಹಿತ್ಯದಲ್ಲಿ ತನಗಿಂತ ಗಟ್ಟಿ ಇರಬಹುದೆ? ಅದು ಹೌದು ಎಂದು ಅವನ ಮನಸ್ಸು ಹೇಳುತ್ತಿದ್ದರೂ ಅದನ್ನು ಡಿಕನ್‌ಸ್ಟ್ರಕ್ಟ್ ಮಾಡಲು ಅವನು ಡಿಆರ್‌ಎನ್ ಶೈಲಿಯನ್ನು ಬಳಸಿಕೊಳ್ಳಲು ಮುಂದಾಗಿ ಪ್ರತಿಬಾರಿ ಸೋಲುತ್ತಿದ್ದ. ಆದರೆ, ಇವನ ಸೋಲನ್ನು ಪ್ರಣತಿ ಸಂಭ್ರಮಿಸುತ್ತಿರಲಿಲ್ಲವಾದ್ದರಿಂದ ಆರಾಧ್ಯ ಗೆಲುವಾಗಿರುತ್ತಿದ್ದ. ಈ ಕಾರಣಕ್ಕಾಗಿಯೇ ಪ್ರಣತಿಯನ್ನು ಹೆಚ್ಚು ಇಷ್ಟಪಡಲು ಆರಂಭಿಸಿದ್ದ. ಇಬ್ಬರೂ ಒಂದೊಂದು ರೀತಿಯಲ್ಲಿ ಇಂಟಲೆಕ್ಚುವಲ್ಸ್ ಆಗಿದಿದ್ದರಿಂದ 'ಮದುವೆ ಆಗೋಣ' ಎನ್ನುವುದನ್ನು ಬಾಯಿಬಿಟ್ಟು ಆಡಿ ನಿಶ್ಚಯ ಮಾಡಿಕೊಳ್ಳದೆ ಸದ್ದಿಲ್ಲದೆ ತಮ್ಮ ಸೈದ್ಧಾಂತಿಕ ಭಾಷೆಯಲ್ಲೇ ಪರೋಕ್ಷವಾಗಿ ನಿರ್ಧರಿಸಿಕೊಂಡಿದ್ದರು.

ಆದರೆ, ಮದುವೆ ಎನ್ನುವುದು ಸುಲಭದ ಸಂಗತಿ ಅಲ್ಲ ಎಂದು ಆರಾಧ್ಯನಿಗೆ ನಿಧಾನಕ್ಕೆ ಅರ್ಥವಾಗಲು ಆರಂಭಿಸಿತ್ತು. ತಾನು ಓದಿದ್ದಕ್ಕೆ ಸರ್ಕಾರಿ ಕಾಲೇಜಿನಲ್ಲಿ ಕೆಲಸ ಸಿಕ್ಕರೆ ಜಾಕ್‌ಪಾಟ್. ಆದರೆ, ಸಿಗೋದು ತೀರಾ ಡೌಟು. ಮೇಷ್ಟ್ರುಗಲು ಮುಂದಾಗಿದ್ದವನನ್ನು ರಾಜಕಾರಣ ಮಾಡಲು ಡಿಆರ್‌ಎನ್ ಸಿಂಡ್ರೋಮ್ ಬಿಡುತ್ತಿರಲಿಲ್ಲ ಮತ್ತು ಅದು ಅವನಿಗೆ ಬರುತ್ತಲೂ ಇರಲಿಲ್ಲ. ಸರ್ಕಾರಿ ಕಾಲೇಜಿನಲ್ಲಿ ಕೆಲಸ ಸಿಗದೆ ಖಾಸಗಿ ಕಾಲೇಜಿಗೆ ಅರ್ಜಿ ಸಲ್ಲಿಸಿದರೆ ಅವರು ತರಕಾರಿ ವ್ಯಾಪಾರದ ರೀತಿ ಮಾತು ಆರಂಭಿಸಿ ತಿಂಗಳಿಗೆ ಹದಿನೆಂಟರಿಂದ ಇಪ್ಪತ್ತು ಸಾವಿರ... ಹೆಚ್ಚೆಂದರೆ ಇಪ್ಪತ್ತೆರಡು ಅಂದಿದ್ದರು. ಇಪ್ಪತ್ತೆರಡು ಸಾವಿರ ತೆಗೆದುಕೊಂಡು ಮದುವೆಯಾದರೆ ಮುಂದೆ ಹುಟ್ಟಲಿರುವ ಮಕ್ಕಳಿಗೆ ಚಡ್ಡಿ ಕೊಡಿಸಲಿಕ್ಕೂ ಸಾಕಾಗಲಿಕ್ಕಿಲ್ಲ ಎನ್ನುವುದು ಡಿಆರ್‌ಎನ್ ತಾತ್ವಿಕತೆಗಳ ಆಚೆಗೆ ಆರಾಧ್ಯನಿಗೆ ಅರ್ಥವಾಗಿ ಒಂದು ಯೋಚನೆ ಹೊಳೆದಿತ್ತು. ಅದು ಕಾಲ ಕಟ್ಟಿಕೊಟ್ಟ ಆಲೋಚನೆ. 'ಇವತ್ತು ಗಂಡ ಹೆಂಡತಿ ಇಬ್ಬರೂ ದುಡಿದರೇನೇ ಬದುಕೋಕೆ ಆಗೋದು. ಲೈಫ್ ಹಂಗಾಗಿದೆ...' ಎಂದು ಯೋಚಿಸುವಾಗ ಪ್ರಣತಿ ಕಣ್ಣಮುಂದೆ ಸುಳಿದಿದ್ದಳು.

ಕಾಲೇಜಲ್ಲಿ ಮಕ್ಕಳಿಗೆ ಸಾಹಿತ್ಯ ಕಲಿಸಬೇಕು ಎಂದು ಪ್ರಣತಿಗೂ ಇಷ್ಟ ಇದೆ. ಆದರೆ, ಅವಳು ಶುದ್ಧ ಸಾಹಿತ್ಯ ಪ್ರೀತಿ ಇರಿಸಿಕೊಂಡಿರುವ ಕಾರಣ ಇಪ್ಪತ್ತು ಇಪ್ಪತ್ತೆರಡು ಸಾವಿರದ ಮಾತೆಲ್ಲ ಗಣನೆಗೆ ತೆಗೆದುಕೊಳ್ಳೋದಿಲ್ಲ. ಶುದ್ಧ ತಾತ್ವಿಕತೆ ಮನೆ ಹಾಳಾಗೋಗ್ಲಿ... ಜೊತೆಗೆ ನಿಂತು ಒಂದಿಷ್ಟು ದುಡಿದ್ರೆ ಸಾಕು ಅನಿಸಿತ್ತು ಆರಾಧ್ಯನಿಗೆ. ಮದುವೆಗೆ ಮುಂಚೆ ಪ್ರಣತಿ ಜೊತೆ ಕೂತು ತನ್ನ ಮನದ ಇಂಗಿತವನ್ನು ಥೇಟ್ ಡಿಆರ್‌ಎನ್ ಸ್ಟೈಲಿನಲ್ಲಿ ಪ್ರೆಸೆಂಟ್ ಮಾಡಿದಾಗ ಪ್ರಣತಿ ನಕ್ಕು ಒಪ್ಪಿಗೆ ಕೊಟ್ಟಿದ್ದಳು. ಅಂದು